ವೆಚ್ಚವನ್ನು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 30,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು"

ಪೂರಕ ಅಂದಾಜುಗಳ (ಮೊದಲನೆ ಕಂತು) 1995-96

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ) : ಮಾನ್ಯ ಅಧ್ಯಕ್ಷರೆ, ಪೂರಕ ಅಂದಾಜು(ಮೊದಲನೆ ಕಂತು) ಒಟ್ಟು 239 ಕೋಟಿ 98 ಲಕ್ಷ ರೂಪಾಯಿಗಳನ್ನು ಈ ಸದನ ಒಪ್ಪಿಗೆ ನೀಡಬೇಕೆಂದು ತಂದಿದ್ದೇನೆ. ಇದರಲ್ಲಿ 215 ಕೋಟಿ ರೂಪಾಯಿಗಳು ಲೆಕ್ಕ ಹೊಂದಾಣಿಕೆ. 23 ಕೋಟಿ ರೂಪಾಯಿಗಳು ಮಾತ್ರ ಕ್ಯಾಶ್ ಔಟ್ ಫ್ಲೋ ಆಗತಕ್ಕಂಥಾದ್ದು. ಆದುದರಿಂದ 23 ಕೋಟಿ ರೂಪಾಯಿ ಕ್ಯಾಶ್ ಔಟ್ ಫ್ಲೋ ಮತ್ತು 215 ಕೋಟಿ 22 ಲಕ್ಷ ರೂಪಾಯಿ ಲೆಕ್ಕ ಹೊಂದಾಣಿಕೆ ಆಗುವಂತಹ ಪೂರಕ ಅಂದಾಜನ್ನು ಮಾನ್ಯ ಸದಸ್ಯರು ಒಪ್ಪಿಗೆ ನೀಡಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಈಗ ಪೂರಕ ಅಂದಾಜುಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ, ಪ್ರಸ್ತಾಪ ಏನೆಂದರೆ,

"31.3.1996 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅಭಿಯಾಚನೆ ಕ್ರಮಾಂಕ 1, 5, 8, 9, 11, 14, 19, 21, 31, 38, 39, 40, 41, 44, 47, 48, 50, 52 ಮತ್ತು 53 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ವಹಿಸಲು ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಪೂರಕ ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

ಶಾಸನ ರಚನೆ

ವಿಧೇಯಕಗಳ ಮಂಡನೆ ಮತ್ತು ಅಂಗೀಕಾರ.

ಕರ್ನಾಟಕ ಧನ ವಿನಿಯೋಗ (ನಂ. 2) ವಿಧೇಯಕ, 1995

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) : ಮಾನ್ಯ ಅಧ್ಯಕ್ಷರೆ, 1995ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ. 2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1995ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ.2) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) : ಮಾನ್ಯ ಅಧ್ಯಕ್ಷರೆ, 1995ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ. 2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕ 1995

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) : ಮಾನ್ಯ ಅಧ್ಯಕ್ಷರೆ, 1995ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ. 3) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1995ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ.3) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) : ಮಾನ್ಯ ಅಧ್ಯಕ್ಷರೆ, 1995ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ನಂ.೩) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಕರ್ನಾಟಕ ಧನ ವಿನಿಯೋಗ (ನಂ.2) ವಿಧೇಯಕ 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) : ಮಾನ್ಯ ಅಧ್ಯಕ್ಷರೆ, ಕಾಫಿ ಬೆಳೆಗಾರರಿಗೆ ಹಿಂದೆ 14 ಎಕರೆಯವರೆಗೆ ವಿನಾಯಿತಿ ಇದ್ದು ಅದನ್ನು ಸರ್ಕಾರ ಪರಿಗಣಿಸಿ ಮತ್ತೆ ಈಗ 15 ಎಕರೆಯವರೆಗೆ ರಿಯಾಯಿತಿ ಕೊಡಲಿಕ್ಕೆ ಸರ್ಕಾರ ಒಪ್ಪಿಕೊಂಡು, ಈಗ 15 ಎಕರೆಯವರಿಗೆ ಕಾಫಿ ಬೆಳೆಗಾರರಿಗೆ ವಿನಾಯಿತಿಯನ್ನು ನಾವು ಕೊಡುತ್ತಿದ್ದೇನೆ.

7.00 ಪಿ.ಎಂ